## ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ

**ಸಿ.ಸಿ.ನಂ.1216/2015**

ಫಿರ್ಯಾದಿ : ಸರ್ಕಾರದ ಪರ ಹೊಳೆನರಸೀಪುರ ನಗರ ಆರಕ್ಷಕರು.

**ವಿರುದ್ಧ**

ಆರೋಪಿ : ಎ1. ದಿನೇಶ ಬಿನ್ ಮುತ್ತಣ್ಣ,
ಸುಮಾರು 23 ವರ್ಷ,
ಟಿ. ಅಂಕನಹಳ್ಳಿ ಗ್ರಾಮ, ಹಳೇಕೋಟೆ ಹೋಬಳಿ,
ಹಾಸನ ಜಿಲ್ಲೆ.
ಎ2. ಮಧು ಲೇಟ್ ನಿಂಗರಾಜ,
ಸುಮಾರು 27 ವರ್ಷ,
ಎ3. ರಾಧಾಕೃಷ್ಣ ಬಿನ್ ಕಾಳೇಗೌಡ,
ಸುಮಾರು 23 ವರ್ಷ,
ಮೇಲ್ಕಂಡ 2 ಮತ್ತು 3 ನೇ ಆರೋಪಿತರು ಬಾನುಕುಪ್ಪೆ,
ಮೂಡಲಕೊಪ್ಪಲು ಗ್ರಾಮ, ಹಳೇಕೋಟೆ ಹೋಬಳಿ,
ಹಾಸನ ಜಿಲ್ಲೆಯ ವಾಸಿಗಳು.
ಎ4. ಕುಮಾರ ಲೇಟ್ ಚಂದ್ರಪ್ಪ,
ಸುಮಾರು 23 ವರ್ಷ,
ಶಾಂತಿ ನಗರ, ಬಡಾವಣೆ, ಹೊಸದುರ್ಗ ಟೌನ್,
ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
ಎ5. ಗುರು ಬಿನ್ ರಂಗಸ್ವಾಮಿ,
ಸುಮಾರು 23 ವರ್ಷ,
ಡಿ. ಸಮುದ್ರವಳ್ಳಿ, ದಂಡಿಗನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.
ಎ6. ರಂಗಸ್ವಾಮಿ ಬಿನ್ ಕಾಳೇಗೌಡ,
ಸುಮಾರು 62 ವರ್ಷ, ಶೆಟ್ಟಿಗೌಡನಹಳ್ಳಿ,
ದಂಡಿಗನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**:: ದೋಷಾರೋಪಣೆ ::-**

ಶ್ರೀ ಆರ್.ಮಹೇಶ ಬಿ.ಎ(ಲಾ)., ಎಲ್‌ಎಲ್.ಬಿ., ಜೆಎಂಎಫ್‌ಸಿ, ಹೊಳೆನರಸೀಪುರ ಆದ ನಾನು ಮೇಲ್ಕಂಡ ಆರೋಪಿಯಾದ ನಿನ್ನ ಮೇಲೆ ಕೆಳಕಂಡಂತೆ ಆರೋಪಣೆಯನ್ನು ಹೊರಿಸುತ್ತಿದ್ದೇನೆ.

ಹೊಳೆನರಸೀಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹಾಸನ ಮೈಸೂರು ರಸ್ತೆಯಲ್ಲಿರುವ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಯ ಬೀಗವನ್ನು ದಿನಾಂಕ 15-11-2014 ರಂದು ಮಧ್ಯರಾತ್ರಿ 2-30 ಗಂಟೆ ಸಮಯದಲ್ಲಿ ಸಾಕ್ಷಿ 1 ಪ್ರವೀಣರವರು ಹಾಕಿಕೊಂಡು ಹೋಗಿದ್ದ ಸಮಯದಲ್ಲಿ ಮಳಿಗೆಯ ಹಿಂಭಾಗದ ಗೋಡೆಯನ್ನು ಎ1 ರಿಂದ ಎ4 ರವರೆಗಿನ ಆರೋಪಿಗಳು ಕಬ್ಬಿಣದ ತುಂಡು ಹಾರೆಯಿಂದ ಕೊರೆದು, ಎ1 ರವರು ಅಂಗಡಿಯ ಒಳಗೆ ಪ್ರವೇಶ ಮಾಡುವುದರ ಮೂಲಕ ಭಾರತ ದಂಡ ಸಂಹಿತೆ ಕಲಂ **457** ರಡಿ ಶಿಕ್ಷಾರ್ಹ ಹಾಗೂ ದಂಡನೀಯ ಅಪರಾಧವನ್ನು ಎಸಗಿರುತ್ತಿಯಾ.

ಕೊನೆಯದಾಗಿ ಅದೇ ದಿನಾಂಕ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಮೇಲ್ಕಂಡ 1 ರಿಂದ 6 ನೇ ಆರೋಪಿಗಳಾದ ನೀವು ಎ1 ರವರು ಅಂಗಡಿಯ ಒಳಗೆ ಪ್ರವೇಶ ಮಾಡಿ ಅಂಗಡಿಯ ಕ್ಯಾಶ್ ಡ್ರಾನಲ್ಲಿದ್ದ ಒಂದು ನೋಕೀಯಾ ಮೊಬೈಲ್, ಅಂಗಡಿಯಲ್ಲಿದ್ದ ಒಂದು ಟಾರ್ಚ್ ಮತ್ತು ಸುಮಾರು 51 ಕೇಸು ಮಧ್ಯ ತುಂಬಿದ ಬಾಕ್ಸ್‌ಗಳನ್ನು ಕಳುವು ಮಾಡಿ ಎ2 ರವರಿಗೆ ಕೊಟ್ಟಿದ್ದು ಮತ್ತು ಎ3 ರವರು ತನ್ನ ಬಾಬ್ತು ಕೆಎ-10-5470 ರ ಟಾಟಾ ಎಸ್ ವಾಹನದಲ್ಲಿ ಮದ್ಯವನ್ನು ಸಾಗಿಸಿರುವುದು ಮತ್ತು ಎ4 ರವರು ಎ1,ಎ2 ಮತ್ತು ಎ3 ರವರೊಂದಿಗೆ ಸೇರಿ ಕಳುವು ಮಾಡುವುದರ ಮೂಲಕ ಮತ್ತು ಕಳುವು ಮಾಡಲು ಸಹಾಯ ಮಾಡುವುದರ ಮೂಲಕ ಭಾರತ ದಂಡ ಸಂಹಿತೆ ಕಲಂ **380** ರಡಿ ಶಿಕ್ಷಾರ್ಹ ಹಾಗೂ ದಂಡನೀಯ ಅಪರಾಧವನ್ನು ಎಸಗಿರುತ್ತೀಯಾ ಎಂದು ಆರೋಪಿಸಲಾಗಿದೆ.

ಪ್ರಶ್ನೆ 1ಃ ನಿನ್ನ ಮೇಲೆ ಹೊರಿಸಲಾಗಿರುವ ಆರೋಪಣೆಯನ್ನು ಕೇಳಿದ್ದೀಯಾ ? ಅದು ನಿನಗೆ ತಿಳಿಯಿತೇ ?

ಉತ್ತರಃ

ಪ್ರಶ್ನೆ 2ಃ ನೀನು ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀಯಾ ? ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ ಃ

ಮೇಲ್ಕಂಡಂತೆ ಆರೋಪಣೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕ ಃ 25/10/2017.

ಸ್ಥಳಃ ಹೊಳೆನರಸೀಪುರ.

ಜೆಎಂಎಫ್‌ಸಿ, ಹೊಳೆನರಸೀಪುರ.